## FINANCIAL BUSINESS DEMANDS FOR EXCESS GRANTS

SRI M. VEERAPPA MOILY (Minister for Finance and Tourism).—Mr. Speaker Sir, I beg to present

'Statements showing the demands for Grants to cover expenditure incurred in excess over Voted Grants and Charged Appropriations for the years 1975-76, 1976-77, 1977-78 and 1978-79 as required under Article 205 (i) (b) of the Constitution of India''.

MR. SPEAKER.—Statements presented

ಶ್ರೀಮತಿ ಅನಸೂಯ ಗಜಾನನಶರ್ಮ. —ಮಾನ್ಯ ಅಧ್ಯಕ್ಷರೇ ನಾನು ಕಳೆದ ಅಧಿವೇಶನದಲ್ಲಿ ಮೂರು ಕಾಲಿಂಗ್ ಅಟೆಂಷನ್ ನೋಟೀಸ್‌ಗಳನ್ನು ಕೊಟ್ಟಿದ್ದೆ. ಅದನ್ನು ಶಾರ್ಟ್‌ನೋಟೀಸ್ ಕೊಶ್ಚನ್ ಮಾಡಿದಿರಿ. ಕಳೆದ ಅಧಿವೇಶನದಲ್ಲಿ ಅವಕಾಶ ಸಿಕ್ಕಲಿಲ್ಲ. ಈ ಅಧಿವೇಶನದಲ್ಲೂ ಅವಕಾಶ ಕ್ಕಲಿಲ್ಲ.

ಅಧ್ಯಕ್ಷರು —ತಾವು ಮೊನ್ನೆ ಬಜೆಟ್ ಮೇಲೆ ಮಾತನಾಡುವಾಗ ವಿಷಯವನ್ನು ಪ್ರಸ್ತಾಪ ಮಾಡಿಬಿಟ್ಟಿದ್ದರೆ ಸರ್ಕಾರ ಉತ್ತರ ಹೇಳಂತ್ತಿತ್ತು.

ಶ್ರೀಮತಿ ಅನಸೂಯ ಗಜಾನನಶರ್ಮ.—ಮಾನ್ಯ ಅಧ್ಯಕ್ಷರೇ ಅದು ಹಾಗಾಗುವುದಿಲ್ಲ. ಪ್ರಶ್ನೆಗಳಿಗೆ ಈಗಲಾದರೂ ಸರ್ಕಾರದಿಂದ ಉತ್ತರ ದೊರೆಯಬೇಕು. ಶಾರ್ಟ್‌ನೋಟೀಸ್ ಎಂದರೆ ಅರ್ಥವಿಲ್ಲವೇ ?

## General Discussion on the Budget for the year 1982-83

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು)—ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಅರ್ಥಮಂತ್ರಿಗಳಿ ೧೯೮೨-೮೩ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿರತಕ್ಕಂಥದ್ದಕ್ಕೆ ನಾನು ಸರ್ವತಾ ಅನುಮೋದಿಸುತ್ತಾ ನಮ್ಮ ರಾಜ್ಯ ಸರ್ಕಾರವು ಸರಳ ಸಮಾಜದ ಪ್ರಗತಿಗೆ ಎಷ್ಟು ಉನ್ನತವಾದಂಥ ಕಾರ್ಯಕ್ರಮಗಳನ್ನು ಮಾಡುತ್ತಿದೆ ಎನ್ನುವ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಪ್ರಪ್ರಥಮವಾಗಿ ಆಯವ್ಯಯ ಪತ್ರದಲ್ಲಿ ೨೦ ಅಂಶದ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದಕ್ಕೆ ನಿಜವಾಗಿಯೂ ಸಂತೋಷ ಪಡತಕ್ಕಂಥ ವಿಚಾರವಾಗಿರುತ್ತದೆಂದು ನನಗನಿಸುತ್ತದೆ. ವಿರೋಧ ಪಕ್ಷದವರು ಆದಾಕ್ಷಣವೇ ಸರ್ಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ವಿರೋಧ ಮಾಡುತ್ತೇವೆಂದು ಹೇಳುವುದಿಲ್ಲ. ಇದು ನಿಜವಾಗಿಯೂ ಬಹಳ ಬೇಸರ ತರತಕ್ಕಂಥ ವಿಷಯ ಮಾನ್ಯ ರಾಮೇಗೌಡರು ಮಾತನಾಡುತ್ತಾ ನಾನು ೨೦ ವರ್ಷಗಳಿಂದ ಚೇರ್‌ಮನ್ ಆಗಿದ್ದೇನೆ; ಒಬ್ಬ ಸರ್ಕಾರಿ ನೌಕರನೂ ಬರುವುದಿಲ್ಲವೆಂದು ಹೇಳಿದಾಗ ಇದು ನಿಜವಾಗಿಯೂ ನಾಚಿಕೆ ಪಡತಕ್ಕಂಥ ವಿಷಯ. ಅವರು ಅಧಿಕಾರದಲ್ಲಿದ್ದಾಗ ೨೦ ಅಂಶಗಳ ಕಾರ್ಯಕ್ರಮಗಳು ಇರಲಿಲ್ಲವೇ ? ಈಗ ನಾನು ಚೇರ್‌ಮನ್ ಆಗಿದ್ದೇನೆ. ಯಾವ ಕಾಲದಲ್ಲಿ ಯಾರೇ ಚೇರ್‌ಮನ್ ಆಗಲಿ ಯಾವುದೇ ಕಾರ್ಯಕ್ರಮಗಳು ಇರಲಿ ಅದು ಚೇರ್‌ಮನ್ ಮೇಲೆ ಹೋಗುತ್ತದೆ. ಅಧಿಕಾರಿಗಳು ತಮ್ಮಪರು ಎಲ್ಲರ ಸಮಕ್ಷಮದಲ್ಲಿಯೇ ಎಲ್ಲ ವಿಷಯಗಳನ್ನು ರೆವ್ಯೂ ಮಾಡತಕ್ಕಂಥದ್ದು ಇದ್ದರೂ ಕೂಡ ಅವರು ಏತಕ್ಕೆ ಈ ಮಾತನ್ನು ಹೇಳಿದರೋ ನನಗಂತೂ ಬಹಳ ಅನುಮಾನವಾಗಿದೆ. ಅದೇ ರೀತಿಯಲ್ಲಿ ಮತ್ತೊಂದು ಮಾತನ್ನು ಹೇಳಿದರು, ಇದರಿಂದ ಬಹಳಷ್ಟು ಬೇಸರವಾಯಿತು. ಅದು ಯಾವುದೆಂದರೆ ಮದರ್ ಡೈರಿ ವಿಚಾರ. ಈ ಮದರ್ ಡೈರಿ ವಿಚಾರದಲ್ಲಿ ಕೂಲಂಕಂಶವಾಗಿ ಏನು ಸರ್ಕಾರದವರು ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುತ್ತಾರೆ ಎನ್ನುವ ಬಗ್ಗೆ ಗಮನ ಹರಿಸಬೇಕು. ಸರ್ಕಾರದವರು ಈಗಾಗಲೇ ಈ ಯೋಜನೆ ಹಾಕಿಕೊಂಡ ಕಾರ್ಯಕ್ರಮದಂತೆ ಜಮೀನನ್ನು ತೆಗೆದುಕೊಂಡಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಇದಕ್ಕಾಗಿ ೮ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಲ್ಯಾಂಡ್ ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಇದೆ. ಸುಮ್ಮನೆ ಏನೋ ಸರ್ಕಾರವನ್ನು ಯಾವುದೋ ರೀತಿಯಲ್ಲಿ ಮಾತನಾಡಿದರೆ ಎಲ್ಲರಿಗೂ ಬೇಸರತರತಕ್ಕಂಥ ವಿಷಯವಾಗುತ್ತದೆ.